OCTOBER 04, 2025

**AKASHAVANI - DHARWAD**

**PRADESH SAMACHARA (KANNADA) 12.00 P.M.**

<><><>

**ಪ್ರಸಾರ ಭಾರತಿ, ಆಕಾಶವಾಣಿ**

**ಧಾರವಾಡ**

**ಪ್ರದೇಶ ಸಮಾಚಾರ**

**<><><>**

**ಕರ್ನಾಟಕ ಏಕೀಕರಣಕ್ಕೆ ಮುನ್ನುಡಿ ಬರೆದ ಗೀತೆ,** 'ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು' ರಚಿಸಿದ, 'ಗದುಗಿನ ವೀರನಾರಾಯಣ' ಎಂಬ, ಅಂಕಿತನಾಮದ ಕವಿ, ಆಧುನಿಕ ಕನ್ನಡದ ಜನಪ್ರಿಯ ನಾಟಕಕಾರ, ಧಾರವಾಡದ ಶ್ರೀ ಹುಯಿಲಗೋಳ ನಾರಾಯಣರಾಯರ ಜನ್ಮ ದಿನವಿಂದು. ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ, ಕವಿ ಸ್ಮೃತಿಗೆ ಗೌರವ ನಮನ ಸಲ್ಲಿಸಿ, ಅವರ ನಾಡಪ್ರೇಮ, ಕನ್ನಡದ ಕಲ್ಪನೆ ಏಕೀಕರಣಕ್ಕೆ ಸ್ಫೂರ್ತಿ, ಎಂದಿದ್ದಾರೆ.

<><><>

**'ವನ್ಯಜೀವಿಗಳು, ಮಾನವ ಜೀವನದಿಂದ ಪ್ರತ್ಯೇಕವಾಗಿಲ್ಲ',** ಅವು ನಮ್ಮ ಬಾಳಿನ ಚಕ್ರವನ್ನು ಪೂರ್ಣಗೊಳಿಸುತ್ತವೆ. ಭವಿಷ್ಯದ ಸುಧೃಢ ಭೂ ಗ್ರಹಕ್ಕಾಗಿ, ಈ ತಿಂಗಳ 8ನೇ ತಾರೀಖಿನ ವರೆಗೆ ಆಯೋಜಿತ, ವನ್ಯಜೀವಿ ಸಪ್ತಾಹದಲ್ಲಿ, ಅವುಗಳ ಆವಾಸಸ್ಥಾನ ರಕ್ಷಣೆಗೆ ಆದ್ಯತೆ ನೀಡೋಣ ಎಂದು, ಅರಣ್ಯ ಮತ್ತು ವನ್ಯಜೀವಿ ಸಂರಕ್ಷಣಾ ವಿಭಾಗ, ಮನವಿ ಮಾಡಿದೆ.

<><><>

**ಲೋಕಸಭೆ ವಿಪಕ್ಷ ನಾಯಕ,** ರಾಹುಲ್ ಗಾಂಧಿ ಅವರು, 'ವಿಶ್ವ ಪ್ರಾಣಿ ದಿನ'ದ ಹಿನ್ನೆಲೆ, ಸಾರ್ವಜನಿಕರ ಸುರಕ್ಷತೆ ಜೊತೆಗೆ, ಪ್ರಾಣಿಗಳ ಹಿತವನ್ನೂ ಕಾಪಾಡಲು ಆದ್ಯತೆ ನೀಡೋಣ. ಬೀದಿ ನಾಯಿಗಳು ಮತ್ತು ಪ್ರಾಣಿಗಳು, ತೊಡೆದು ಹಾಕಬೇಕಾದ ಸಮಸ್ಯೆ ಅಲ್ಲ. ಕಾಳಜಿ ವಹಿಸಬೇಕಾದ ಜೀವಗಳು' ಎಂದು, ಕೋರಿದ್ದಾರೆ. ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ, ಎಕ್ಸ್ ಮಾಧ್ಯಮದಲ್ಲಿ, ಮರು ಟ್ವೀಟ್ ಮಾಡಿ, ಪ್ರಾಣಿ ದಯೆಗೆ, ಸಾರ್ವಜನಿಕರಲ್ಲಿ ಮನವಿ ಮಾಡಿದೆ.

<><><>

**ದೇಶದಲ್ಲಿ ನಿತ್ಯ, 1 ಲಕ್ಷ 29** ಸಾವಿರಕ್ಕೂ ಹೆಚ್ಚು ಟನ್, ಘನತ್ಯಾಜ್ಯವನ್ನು ಹಾಗೂ ಸಾವಿರದ 4 ನೂರಾ 37 ಲಕ್ಷ ಟನ್ ಕಸವನ್ನು, ಸಂಸ್ಕರಿಸಲಾಗುತ್ತಿದೆ. 7 ಸಾವಿರದ 6 ನೂರಾ 46 ಕ್ಕೂ ಅಧಿಕ ಎಕರೆ, ಕಸ ಭರಿಸುವ ಜಾಗೆಗಳನ್ನು, ಪರಿಸರ ಸ್ನೇಹಿ ಸ್ಥಳಗಳಾಗಿ ಮರು ಸ್ಥಾಪಿಸಲಾಗಿದೆ. ಸ್ವಚ್ಛ ಭಾರತದ ಕನಸು, ಸಾಕಾರಗೊಳ್ಳುತ್ತಿದೆ.

<><><>

**'ಸ್ವಚ್ಛ ಭಾರತ, ಸ್ವಸ್ಥ ಭಾರತ'** ಧ್ಯೇಯದೊಂದಿಗೆ, ವಿಜಯನಗರ ಜಿಲ್ಲೆ, ಹೊಸಪೇಟೆಯ ವಿಜಯನಗರ ಮಹಾವಿದ್ಯಾಲಯದ, ಎನ್.ಎಸ್.ಎಸ್. ಘಟಕ, ವಿದ್ಯಾರ್ಥಿಗಳಿಂದ, ಶ್ರಮದಾನ ಹಾಗೂ ಆರೋಗ್ಯ ಜಾಗೃತಿ ಶಿಬಿರ ಆಯೋಜಿಸಿತ್ತು. ರಾಷ್ಟ್ರೀಯ ಸೇವಾ ಯೋಜನೆ ಘಟಕದ ಅಧಿಕಾರಿ, ಗಾದೆಪ್ಪ ಈ ಕುರಿತು, ಮಾಹಿತಿ ನೀಡಿದ್ದಾರೆ.

<><><>

**ಮಕ್ಕಳಲ್ಲಿ ಕೆಮ್ಮಿನ ಸಿರಪ್‌ಗಳ ತರ್ಕ ಬದ್ಧ** ಬಳಕೆಯ ಬಗ್ಗೆ, ಕೇಂದ್ರ ಆರೋಗ್ಯ ಸಚಿವಾಲಯ, ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳಿಗೆ, ಸಲಹೆ ನೀಡಿದೆ. ಮುಖ್ಯವಾಗಿ 2 ವರ್ಷದೊಳಗಿನ ಮಕ್ಕಳು, ಸಾಮಾನ್ಯವಾಗಿ 5 ವರ್ಷದೊಳಗಿನ ಮಕ್ಕಳಿಗೆ, ಕೆಮ್ಮಿನ ಔಷಧಿಯನ್ನು ಕಟ್ಟುನಿಟ್ಟಾದ ವೈದ್ಯಕೀಯ ಮೇಲ್ವಿಚಾರಣೆಯಲ್ಲಿ ಮಾತ್ರ, ಬಳಸುವಂತೆ, ಎಚ್ಚರಿಸಿದೆ.

<><><>

**ಕಳೆದ ಸೆಪ್ಟೆಂಬರ್ 17 ರಂದು,** ಪ್ರಧಾನಮಂತ್ರಿ ಚಾಲನೆ ನೀಡಿದ, 'ಸ್ವಸ್ಥ ನಾರಿ, ಸಶಕ್ತ ಪರಿವಾರ' ಅಭಿಯಾನದಡಿ, 18 ಲಕ್ಷ ಆರೋಗ್ಯ ಶಿಬಿರಗಳ ಮೂಲಕ, 6 ಕೋಟಿ 50 ಲಕ್ಷ ಮಹಿಳೆಯರ ಆರೋಗ್ಯ ತಪಾಸಣೆ ಕೈಗೊಳ್ಳಲಾಗಿದೆ ಎಂದು, ಕೇಂದ್ರ ಆರೋಗ್ಯ ಖಾತೆ ಸಚಿವ ಜೆ.ಪಿ. ನಡ್ಡಾ ತಿಳಿಸಿದ್ದಾರೆ.

**ಧಾರವಾಡ ಜಿಲ್ಲೆ ಉಸ್ತುವಾರಿ ಸಚಿವ** ಹಾಗೂ ಕಾರ್ಮಿಕ ಖಾತೆ ಸಚಿವರೂ ಆದ, ಸಂತೋಷ ಲಾಡ ಅವರು, ಧಾರವಾಡ ಜಿಲ್ಲಾ ಪಂಚಾಯ್ತಿ ಪಕ್ಕದಲ್ಲಿ, ಇಂದು ಬೆಳಗ್ಗೆ ಅಕ್ಕ ಕ್ಯಾಂಟೀನ್‌ಗೆ, ಚಾಲನೆ ನೀಡಿ, ಜಿಲ್ಲಾಡಳಿತದ ಹಿರಿಯ ಅಧಿಕಾರಿಗಳೊಂದಿಗೆ, ಉಪಾಹಾರ ಸವಿದರು.

<><><>

**ಸರಕು ಮತ್ತು ಸೇವಾ ತೆರಿಗೆ,** 'ನೆಕ್ಸ್ಟ್ ಜೆನ್ ಜಿ.ಎಸ್.ಟಿ.' ಎರಡನೇ ಆವೃತ್ತಿ ಪರಿಷ್ಕರಣೆ ಹಾಗೂ ಜಿ.ಎಸ್.ಟಿ. ಉಳಿತಾಯ ಉತ್ಸವದ ಹಿನ್ನೆಲೆ, ಈ ಬಾರಿ ನವರಾತ್ರಿ ಹಾಗೂ ವಿಜಯ ದಶಮಿ ಹಬ್ಬದ ಸಂದರ್ಭದಲ್ಲಿ, ಕಳೆದ 10 ವರ್ಷಗಳಲ್ಲಿ, ಅತೀ ಹೆಚ್ಚಿನ ವ್ಯಾಪಾರ–ವಹಿವಾಟು ದಾಖಲಾಗಿದೆ. ಅಟೋ ಮೊಬೈಲ್, ಇಲೆಕ್ಟ್ರಾನಿಕ್ಸ್ ಹಾಗೂ ಟೆಕ್ಸ್‌ಟೈಲ್ಸ್ ಉದ್ಯಮಗಳಲ್ಲಿ ಭಾರಿ ಏರಿಕೆ ಕಂಡುಬಂದಿದೆ.

<><><>

**36 ಜೀವ ರಕ್ಷಕ ಔಷಧಿಗಳು ಸೇರಿದಂತೆ,** ಅನೇಕ ಔಷಧಿಗಳ ಜಿ.ಎಸ್.ಟಿ. ಕರದರ, ಸೊನ್ನೆಗೆ ಇಳಿಕೆಯಾದ ಹಿನ್ನೆಲೆ, ಆರೋಗ್ಯಾಕಾಂಕ್ಷಿಗಳಿಗೆ, ತುಂಬ ಅನುಕೂಲವಾಗಿದೆ ಎಂದು, ಕೇಂದ್ರ ವಾರ್ತಾ ಶಾಖೆ ತಿಳಿಸಿದೆ. ಕಂಬೈನ್ ಹಾರ್ವೆಸ್ಟರ್ ಥ್ರೆ ರ್ ಮೇಲೆ 1 ಲಕ್ಷ 25 ಸಾವಿರ ರೂಪಾಯಿ ವರೆಗೆ ಹಾಗೂ ಟ್ರ್ಯಾಕ್ಟರ್ ಖರೀದಿ ಮೇಲೆ, 40 ಸಾವಿರ ರೂಪಾಯಿ ವರೆಗೆ ಉಳಿತಾಯ ಸಾಧ್ಯವಾಗಿದೆ.

<><><>

**ಅಖಿಲ ಭಾರತ, ಮಹಾಪೌರರ** ಕೌನ್ಸಿಲ್ ಉಪಾಧ್ಯಕ್ಷರಾಗಿ, ಹುಬ್ಬಳ್ಳಿ ಧಾರವಾಡ ಮಹಾನಗರ ಪಾಲಿಕೆಯ, ಮಹಾಪೌರರಾದ ಜ್ಯೋತಿ ಪಾಟೀಲ ಆಯ್ಕೆಯಾಗಿದ್ದಾರೆ. ಪಾಲಿಕೆಯ ಸದಸ್ಯರು, ಅಧಿಕಾರಿ ಹಾಗೂ ಸಿಬ್ಬಂದಿ ವರ್ಗ, ಅಭಿನಂದಿಸಿದೆ.

<><><>

**2014 ರ, ಅಕ್ಟೋಬರ್ 3 ರಂದು,** ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು, ಆಕಾಶವಾಣಿ ಮೂಲಕ, ತಮ್ಮ ಮನ್ ಕಿ ಬಾತ್ ಆರಂಭಿಸಿ, 126ನೇ ಆವೃತ್ತಿಯ ಮನದ ಮಾತಿ ಮೂಲಕ, 11 ವರ್ಷಗಳು ಪೂರ್ಣಗೊಂಡವು. ಜನ, ಮನದ ದನಿಯಾಗಿ, ಜನಾಂದೋಲನವಾಗಿ ಮನ್ ಕಿ ಬಾತ್ ರೂಪುಗೊಂಡಿದೆ.

<><><>

**ಉತ್ತರ ಕರ್ನಾಟಕ ಭಾಗದ, 11 ಜಿಲ್ಲೆಗಳಿಗೆ,** ಇಂದು ಮತ್ತು ನಾಳೆ, ಯೆಲ್ಲೋ ಅಲರ್ಟ್ ಪ್ರಕಟಿಸಲಾಗಿದೆ. ಕಲಬುರಗಿಯಲ್ಲಿ ಇಂದು, ಭಾರೀ ಮಳೆ ನಿರೀಕ್ಷಿಸಲಾಗಿದೆ. ಮುಂಜಾಗ್ರತೆ ವಹಿಸುವಂತೆ, ನದಿ ಪಾತ್ರದ ಜನಗಳಿಗೆ ಎಚ್ಚರಿಕೆ ನೀಡಿ, ರಾಜ್ಯ ವಿಕೋಪ ಉಸ್ತುವಾರಿ ಕೇಂದ್ರ ಮಾಹಿತಿ ನೀಡಿದೆ.

**<><><>**

**ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.**

**<><><>**

**ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ ಮಧ್ಯಾಹ್ನ 1 ಗಂಟೆ 10 ನಿಮಿಷಕ್ಕೆ.**

**<><><>**